Doc-283
T-P2

R No KRNN 12

2-5-74

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಆರಮನೆ ಪರಸ್ಪೇಡಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಎಸ್ಟೇಟ್ ಪ್ರಹ್ಲಾದ ಎಂ. ಎಸ್. ಕೃಷ್ಣಯ್ಯ (3 ಪು.)

ವಿಶ್ವ ಬ್ಯಾಂಕಿನಿಂದ ಭಾರತಕ್ಕೆ ಹಣ

ಮುಷ್ಕರ

ನವದೆಹಲಿ– ಕೇಂದ್ರದ 3 ನೇ ಮತ್ತು 4 ನೇ ತರಗತಿಯ ನೌಕರರು ಮೇ 10 ರಿಂದ ಅನಿರ್ದಿಷ್ಟ ಮುಷ್ಕರ ಹೂಡಲು ಅವರ ಸಂಘ ಸೂಚಿಸಿದೆ

★

ಅಧ್ಯಕ್ಷರ ಚುನಾವಣೆ

ನವದೆಹಲಿ– ಭಾರತ ಅಧ್ಯಕ್ಷರ ಚುನಾವಣೆ ಸಂಬಂಧದಲ್ಲಿ, ಕೇಂದ್ರವು ಕೇಳಿರುವ ಅಭಿಪ್ರಾಯವನ್ನು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರೂ ಸೇರಿ ಆರು ಜಡ್ಜರು ಪರಿಶೀಲಿಸಲಿರುವರು.

★

ಕುದುರೆಮುಖ ಪ್ರಾಜೆಕ್ಟ್

ತೆಹರಾನ್ — ಕುದುರೆಮುಖ ಕಬ್ಬಿಣ ಅದಿರು ಪ್ರಾಜಕ್ಟಿಗೆ ಇರಾನ್ ಮುನ್ನೂರು ವಿಲಿಯ ಸಾಲ ಕೊಡಲಿದ್ದು ಅದನ್ನು ವಿಸ್ತರಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಇರಾನ್ ಅದಿರು ಉತ್ಪಾದನೆ ಅರ್ಧದಷ್ಟನ್ನು 20 ವರ್ಷಗಳ ಕಾಲ ಅ ಮದು ಮಾಡಿಕೊಳ್ಳಲಿದೆ.

●

ಪಶುಸಂಗೋಪನ ಸೆಮಿನಾರ್

ನಾಗಪುರ– ಪಶುಸಂಗೋಪನ ಮತ್ತು ಕ್ಷೀರಕ್ಷೇತ್ರ ಅಭಿವೃದ್ಧಿ ಬಗ್ಗೆ 2 ದಿನಗಳ ಸೆಮಿನಾರು ವಾರ್ಧಾದಲ್ಲಿ ಜುಲೈ 13–14 ರಂದು ನಡೆಯಲಿದೆ – ಆಚಾರ್ಯ ವಿನೋಬ ರವರು ನೇತೃತ್ವ ವಹಿಸುವ ನಿರೀಕ್ಷೆ.

★

ಮೈಸೂರು ರಾಜ್ಯದ ಅನೇಕ ಪೌರಸಭೆಗಳ ಚುನಾವಣೆ ಬೇಗನೆ ನಡೆಯಲಿರುವದಾಗಿ ಬೆಂಗಳೂರು ವಾರ್ತೆ.

ದಿವ್ಯವಾಣಿ

ಸಾರ್ವಜನಿಕರ ಸುರಕ್ಷತೆ ವಿರುದ್ಧ ಯಾರಿಂದಲೂ, ಎಲ್ಲೂ, ಯಾವಾಗಲೂ ಮುಷ್ಕರಿಸಲು ಹಕ್ಕಿಲ್ಲ

— ಕಾಲ್ವಿನ್ ಕೂಲ್ವಿಡ್ಜ್

ಕರ್ನಾಟಕ

"ಕರ್ನಾಟಕ" ನಾಮಾಂಕಿತ ಕನ್ನಡ ಸಾಕ್ಷ್ಯ ಚಿತ್ರ ಪ್ರದರ್ಶನ ಮೈಸೂರು ಪ್ರಭಾ ಚಿತ್ರ ಮಂದಿರದಲ್ಲಿ ಇತ್ತೀಚೆಗೆ ಪ್ರದರ್ಶನವಾಯಿತು. ಮುಕ್ಕಾಲು ಗಂಟೆಯ ಹೊತ್ತು ಪ್ರದರ್ಶಿತವಾದ ಈ ಚಿತ್ರ ಪ್ರೇಕ್ಷಕರನ್ನು ಆಕರ್ಷಣೆ ಮಾಡಿತು. ಕರ್ನಾಟಕದ ಕಲೆಯ ನಾನಾ ಮುಖಗಳನ್ನು, ಸಾಮಾಜಿಕ, ಧಾರ್ಮಿಕ ಜೀವನಗಳ ಕೆಲ ಅಂಶಗಳನ್ನು, ಮುಂತಾದ ವಿಚಾರಗಳನ್ನು ಪರಿಚಯ ಮಾಡಿಕೊಡುವುದರಲ್ಲಿ ಚದುರಂಗರವರು ಯಶಸ್ವಿಯಾಗಿರುವರಲ್ಲದೆ, ಸಾಕ್ಷ್ಯ ಚಿತ್ರ ಕಾರಣಕರ್ತರಿಗೆ ಕೀರ್ತಿ ತರುವಂತಿದೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ಡಿ. ಜವರೇಗೌಡರವರು ಚಿತ್ರಪ್ರದರ್ಶನದ ಮುಖ್ಯ ಅತಿಥಿಯವರಾಗಿದ್ದರು. ಡಾ|| ಕೆ. ವಿ. ಪುಟ್ಟಪ್ಪ ಮುಂತಾದ ಗಣ್ಯರು ಚಿತ್ರಪ್ರದರ್ಶನ ವೀಕ್ಷಿಸಿದರು. ಮೈಸೂರು ವಿಭಾಗದ ವಾರ್ತಾ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಪಿ. ನಾಗರಾಜಾರ್ ರವರು ಅತಿಥಿಗಳನ್ನು ಸ್ವಾಗತಿಸಿದರು.

★

ವಿವಾಹ ಮಹೋತ್ಸವ

ಚಿ|| ರಾ|| ಬಿ ಪಿ. ನಿಂಗೇಗೌಡ (ಹಿರಿಯ ಗ್ರಾಮ ಪಟೇವನಕೋಟೆ ತಾಲ್ಲೂಕು ಬೊಪ್ಪನಹಳ್ಳಿಯಲ್ಲಿರುವ ಶ್ರೀ ಚಿಕ್ಕಣ್ಣೇಗೌಡರ ಎರಡನೆಯ ಮಗ) ಚಿ|| ಸೌ|| ಎನ್. ಎಸ್. ನಾಗವ್ಯ (ನೇರಳೆ ಗ್ರಾಮದ ಶ್ರೀ ಎನ್. ಸಿ. ಶಿವಣ್ಣನವರ ಪುತ್ರಿ) ಇವರ ವಿವಾಹಮಹೋತ್ಸವ ನೇರಳೆ ಗ್ರಾಮದಲ್ಲಿ ಈ ದಿನ ವಿಜೃಂಭಣೆಯಿಂದ ನೆರವೇರಿತು.

○

ಮಾವಿನ ಹಣ್ಣಿಲ್ಲ

ಈ ತಿಂಗಳು 8 ನೇ ತಾ|| ನಿಂದ ಸೂಚಿತವಾಗಿರುವ ರೈಲ್ವೆ ಮುಷ್ಕರದ ದೆಸೆಯಿಂದ ದೆಹಲಿಗೆ ಆಂಧ್ರದಿಂದ ಮಾವಿನಹಣ್ಣು ಹೋಗುವಂತಿಲ್ಲವಾಗಿದೆ

ಮಂತ್ರಿಯ ಬಂಧನ

ಇತಿಯೋಪಿಯಾದ ಸಂಪರ್ಕ ಮಂತ್ರಿ ಜನರಲ್ ಅಸೆಫಾ ಆಯೆನೆಯವರನ್ನು ಸಶಸ್ತ್ರ ಸೇನಾ ಪಡೆ ಬಂಧಿಸಿರುವದಾಗಿ ಆಡಿಸ್‌ಅಬಾಬ ವಾರ್ತೆ.

★

ನ್ಯೂಸ್‌ಪ್ರಿಂಟ್ ಪರಿಸ್ಥಿತಿ

ಕಳೆದ ವರ್ಷ ನ್ಯೂಸ್ ಪ್ರಿಂಟ್ ಕೊರತೆ ಮೂವತ್ತು ಬೋತಾ ಆಗಿತ್ತು. ಅದರ ಪರಿಸ್ಥಿತಿ ಈ ವರ್ಷ ಸಹ ಸಂತೋಷಕರವಾಗಿಲ್ಲ – ಎಂದು ಕೇಂದ್ರ ವಾರ್ತಾ ಮಂತ್ರಿ ಶ್ರೀ ಐ ಕೆ ಗುಜ್ರಾಲ್ ರಾಜ್ಯಸಭೆಯಲ್ಲಿ ತಿಳಿಸಿದರು.

★

ನಿರ್ಬಂಧಿಸಲು ಕರೆ

ವೈದ್ಯಕೀಯ ಪದವೀಧರರು ವಿದೇಶಗಳಲ್ಲಿ ಕೆಲಸಕ್ಕೆ ಹೋಗುವುದನ್ನು ನಿರ್ಬಂಧಿಸಬೇಕೆಂದು ಮೈಸೂರು ವಿಧಾನಸಭೆಯಲ್ಲಿ ಸದಸ್ಯರು ತಿಳಿಸಿದರು.

★

ಸಭಾತ್ಯಾಗ

ಕರ್ನಾಟಕ ಮೋಟಾರು ವಾಹನ ತೆರಿಗೆ ತಿದ್ದುಪಡಿಯನ್ನು ಸಾರಿಗೆ ಮಂತ್ರಿ ಶ್ರೀ ಕೆ. ಹೆಚ್. ರಂಗನಾಥ್‌ರವರು ಮಂಡಿಸಬೇಕಾಗಿದ್ದು, ಆದರು ಗೈರುಹಾಜರಾದುದರಿಂದ ಅದನ್ನು ಪ್ರತಿಭಟಿಸಿ, ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರನ್ನು ಉಳಿದು ಇಡೀ ವಿರೋಧ ಪಕ್ಷ ನಿನ್ನೆ ವಿಧಾನ ಸಭೆಯಲ್ಲಿ ಸಭಾ ಪರಿತ್ಯಾಗ ಮಾಡಿತೆಂದು ಬೆಂಗಳೂರಿನಿಂದ ವರದಿ ಬಂದಿದೆ.

★ ಕಲ್ಲಿದ್ದಲು ತುಟ್ಟಿಯ ಕಾರಣ ಮೈಸೂರು ವಿಭಾಗದಲ್ಲಿ ನಲವತ್ತೆರಡು ರೈಲುಗಳ ಓಡಾಟ ರದ್ದಾಗಿದೆ.

★ ಕಾಲರಾದಿಂದ ಅನೇಕ ಸಾವಾಗಿರುವುದಾಗಿ ಸದಸ್ಯರು ಬೆಂಗಳೂರು ಕಾರ್ಪೊರೇಷನ್ ಸಭೆಯಲ್ಲಿ ತಿಳಿಸಿದರು

ನೀರಾವರಿ ಸಂಸ್ಥೆ

ಆಂಧ್ರಕ್ಕೆ ನೀರಾವರಿ ಅಭಿವೃದ್ಧಿ ಸಂಸ್ಥೆ ರಚಿಸಲು ಆಂಧ್ರ ಮಂತ್ರಿಮಂಡಲ ನಿರ್ಧರಿಸಿದೆ.

★

ನೋಟೀಸು ಹೋಗಿಲ್ಲ

ಅಧಿಕೃತ ಅಂಚೆ ಕೆಲಸಗಾರರ ಸಂಸ್ಥೆಗಳಿಂದ ಮುಷ್ಕರದ ನೋಟೀಸು ಬಂದಿಲ್ಲವೆಂದು ಅಂಚೆ ಮತ್ತು ತಂತಿ ಮಂಡಲಿಯ ಪ್ರಮುಖರೋರ್ವರು ನವ ದೆಹಲಿಯಲ್ಲಿ ತಿಳಿಸಿದರು

★

ವಿಶ್ವಸಂಸ್ಥೆ ಸಹಾಯ

ಟ್ರಾಂಬೆ ಗೊಬ್ಬರ ಸಂಸ್ಥೆ ವಿಸ್ತರಣೆ ಮತ್ತು ಚಂಬಲ್ ಮತ್ತು ರಾಜಸ್ತಾನ ನಾಲೆ ಪ್ರದೇಶ ಅಭಿವೃದ್ಧಿಗಾಗಿ ಒಟ್ಟು ಸುಮಾರು ನೂರೆಂಬತ್ತು ಮಿಲಿಯ ಡಾಲರು ಹಣ ಪಡೆಯುವ ಸಲುವಾಗಿ ಈ ತಿಂಗಳು ವಿಶ್ವಬ್ಯಾಂಕ್ ಸಂಗಡ ಸಂಧಾನ ಮಾತುಕತೆ ನಡೆಯುವುದೆಂದು ನವ ದೆಹಲಿಯಿಂದ ಬಂದ ವಾರ್ತೆ ತಿಳಿಸುತ್ತದೆ. ಕಲವು ದಿನಗಳಲ್ಲಿ ನಿಯೋಗ ವಾಷಿಂಗ್ಟನ್‌ಗೆ ಹೋಗುವುದು.

○

ರಸ್ತೆ ದುರ್ಘಟನೆಯಲ್ಲಿ ಮರಣ

ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಜೀಪು ಮರಕ್ಕೆ ಬಡಿದು ಹನ್ನೆರಡು ಮಂದಿಯ ಜೈಕೆ ಸ್ಥಳದಲ್ಲಿ 8 ಜನ ಸತ್ತರು ಆಸ್ಪತ್ರೆಯಲ್ಲಿ ಓರ್ವನು ಸತ್ತನು.

★

ವಿಚಾರಣೆ

ರಾಷ್ಟ್ರಪತಿಯವರ ಚುನಾವಣೆ ಕುರಿತಾ ಸುಪ್ರೀಂ ಕೋರ್ಟಿನ 6 ಜನರ ವಿಶೇಷ ಪೀಠ ಮೇ 27 ರಿಂದ 8 ದಿನಗಳ ವರೆಗೆ ವಿಚಾರಣೆ ನಡೆಸುವುದೆಂದು ನವ ದೆಹಲಿ ವಾರ್ತೆ

(2)

ಅಂಗವಿಹೀನರಿಗೆ ದೂರವಾಣಿ

ಹ್ಯಾನೋವರ್ (ಡಾಡ್)– ಪಶ್ಚಿಮ ಜರ್ಮನಿಯ ಸಂಸ್ಥೆಯೊಂದು ವಿದ್ಯುತ್ ಕಣದಲ್ಲ್ಲಿ ರೂಪಿಸಿದ ದೂರವಾಣಿಯನ್ನು ತಯಾರಿಸಿದೆ ; ಇದನ್ನು ಕೈಕಾಲಿಲ್ಲದ ಕಾರುಡರೂ ಉಪಯೋಗಿಸಬಹುದು. ಸುರೋವಾಟ್ 400 ಎಂ ಎಂದು ಕರೆಯಲ್ಪಡುವ ಈ ಸಾಧನವು ಈಗಾಗಲೇ ಮಾರುಕಟ್ಟೆಗೆ ಬಂದಿದೆ ; ಇದನ್ನು ಸ್ವಾವಶ್ಯಕವಾಗಿ ದೂರವಾಣಿಯಂತ್ರಕ್ಕೆ ತಂಗಿಸಿಡಬಹುದು ; ಇದರ ಬೆಲೆ 1200 ಮಾರ್ಕ್ ಆದರೂ ಸಮಾಜ ಕಲ್ಯಾಣ ಕಾನೂನಿನ ಮೇರೆಗೆ ಜರ್ಮನಿಯಲ್ಲಿ ತುಂಬಾ ಅಂಗವಿಹೀನವಾದವರಿಗೆ ಇದನ್ನು ಉಚಿತವಾಗಿ ಕೊಡಲಾಗುತ್ತದೆ. (ಯು ಪಿ ಎಸ್)

‖

ಶಿಂಬಗನೂರಿನ ಸ್ವಾರಸ್ಯ

ಭಾರತದ ಮಧುರೈ ಜಿಲ್ಲೆಯ ಪಳನಿಬೆಟ್ಟಗಳಲ್ಲಿ ಶೇಂಬಗನೂರು ಎಂಬ ಚಿಕ್ಕ ಸ್ಥಾನವಿದೆ – ಅಲ್ಲಿ ಕ್ರೈಸ್ತ ಗುರು ನಡೆಸುತ್ತಿರುವ ಚಿಕ್ಕ ಪೋಸ್ಟಾಫೀಸು ಭಾರತದ ಅತಿ ನೀಟಾಗಿ ನಡೆಸಲ್ಪಡುತ್ತಿರುವ ಪೋಸ್ಟಾಫೀಸು ಎಂದು ಕೆಲ ತಿಂಗಳ ಹಿಂದೆ ಘೋಷಿಸಲ್ಪಟ್ಟಿತು – 6000 ಅಡಿ ಎತ್ತರದಲ್ಲಿರುವ ಶೆಂಬಗನೂರು ಭಾರತದಲ್ಲೇ– ಪ್ರಾಯಶಃ ಏಷ್ಯಾದಲ್ಲೇ, ಗವನರ್ಹವಾದುದಾಗಿದೆ – ಅಲ್ಲಿ ಒಂದು ದೊಡ್ಡ ಕೊಠಡಿಯಲ್ಲಿ ಅಪೂರ್ವವಾದ 4000 ವಿಚಿತ್ರ ವಸ್ತುಗಳು ಪ್ರದರ್ಶಿಸಲಾಗಿದೆ.

ವುಡ್‌ಲಾಂಡ್ಸ್ 3 5 74 ರಿಂದ

ಅವೋಘ 2 ನೇ ವಾರ

ಉ ಪಾ ಸ ನೆ

ಕನ್ನಡ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ : ಆರತಿ ಡಾ|| ಮಣ್ಣೂರ್ ಶಿವರಾಂ ಕೆ. ಎಸ್. ಅಶ್ವತ್ಥ್, ಲೀಲಾವತಿ ಮುಂತಾದವರು ದಿಗ್ದರ್ಶನ : ಎಸ್. ಆರ್. ಪುಟ್ಟಣ್ಣ ಕಣಗಾಲ್

25-4-74 ರಿಂದ ಬಾಲ್ಕನಿ ತರಗತಿಗಳಿಗೆ ಮಾತ್ರ ಮುಂಚಿತವಾಗಿ ಟಿಕೆಟ್ ಕೊಡಲಾಗುವುದು ದಿನ ಬೆಳಿಗ್ಗೆ 10-30 ರಿಂದ 11-30 ರ ವರೆಗೆ

ಅಪೆರಾ 26 4 74 ರಿಂದ

ನಾಗ್ ಮೇರೆ ಸಾಥಿ

ರೋಮಾಂಚಕಾರಿ ಹಿಂದಿ ವರ್ಣ ಚಿತ್ರ

ದಿನ 3 ಪ್ರದರ್ಶನಗಳು

For Large Range of Daily Wear

Nylex, Cotton, Voile, etc. Sarees

in up-to-date Designs

Please Visit :

Bank Road Bahusar

SHAKTI

SUDHA

A Superb Tonic

Contribute Liberally
to the National Defence Fund

Quality Printing Neat Binding

Lakshminarasimha Press

Sivarampet, Mysore 1

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore